**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

## 2020–21ನೇ ಸಾಲಿಗೆ ಅನ್‌ಲೈನ್ ನಾನ್–ಇಂಟರಾಕ್ಟೀವ್–ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ತಾತ್ಕಾಲಿಕ ವೇಳಾಪಟ್ಟಿ.

| ಕ್ರ.ಸಂ | ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ವಿವರ | ದಿನಾಂಕ ಮತ್ತು ಸಮಯ |
|---|---|---|
| 1. | 2020–21ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಗಳಿಗೆ ಅಧಿಸೂಚನೆ | 03–08–2020 |
| 2. | ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://dtetech.karnataka.gov.in/kartechnical, dtek.karnataka.gov.in & www.cetonline.karnataka.gov.in/kea/ ಗಳ ಮೂಲಕ ಪ್ರಚುರಪಡಿಸಿರುವ ಮಾಹಿತಿ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ವಯ ಅಭ್ಯರ್ಥಿಗಳು ಸ್ವತಃ ಅಥವಾ ಸಮಿಪದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳಲ್ಲಿ ಉಪನ್ಯಾಸಕರ ಸಹಕಾರದೊಂದಿಗೆ ಆನ್‌ಲೈನ್ ಮುಖಾಂತರ ಅರ್ಜಿ ಹಾಗೂ ತಮ್ಮ ಇಚ್ಛೆಗನುಗುಣವಾಗಿ ಕೋರ್ಸ್/ಕಾಲೇಜ್‌ಗಳ ಆಯ್ಕೆ ಮಾಡಿ ಆಪ್ಷನ್ ಎಂಟ್ರಿಯನ್ನು ಸಲ್ಲಿಸಲು ಪ್ರಾರಂಭ ಮತ್ತು ಅಂತಿಮ ದಿನಾಂಕ | 06–08–2020 ಬೆಳಿಗ್ಗೆ 10.00 ರಿಂದ 22–08–2020 ಸಂಜೆ 5.00 ವರೆಗೆ |
| 3. | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆ ಮೇಲ್ಕಂಡ ವೆಬ್‌ಸೈಟ್‌ಗಳ ಮೂಲಕ ಪ್ರಕಟಿಸಲಾಗುವುದು ಹಾಗೂ ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ರವಾನಿಸಲಾಗುವುದು. | 24–08–2020 |
| 4. | ಎಸ್.ಎಸ್.ಎಲ್.ಸಿ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಮೆರಿಟ್ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಮೂಲ ದಾಖಲೆಗಳೊಂದಿಗೆ ಪರಿಷ್ಕರಣೆ/ತಿದ್ದುಪಡಿಗೆ ಹಾಗೂ ಆಪ್ಷನ್ ಎಂಟಿಯಲ್ಲಿ ಯಾವುದೇ ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ ಅಭ್ಯರ್ಥಿಗಳು ಸ್ವತಃ ಆನ್‌ಲೈನ್ ಮೂಲಕ ಅಥವಾ ಸಮಿಪದ ಯಾವುದೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳಲ್ಲಿ ಮನವಿ ಸಲ್ಲಿಸಲು ಪ್ರಾರಂಭ & ಅಂತಿಮ ದಿನಾಂಕ : | 25–08–2020 ಬೆಳಿಗ್ಗೆ 10.00 ರಿಂದ 27–08–2020 ಸಂಜೆ 5.00 ವರೆಗೆ |
| 5. | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆ | 28–08–2020 |
| 6. | ಅಣಕು ಸೀಟು ಆಯ್ಕೆ ಫಲಿತಾಂಶ ಪಟ್ಟಿ ಪ್ರಕಟಣೆ (Mock allotment Result) | 01–09–2020ರ ಸಂಜೆ 4.00 ಗಂಟೆಗೆ |
| 7. | ಅಣಕು ಸೀಟು ಆಯ್ಕೆ ಫಲಿತಾಂಶ ಪ್ರಕಟಣೆ ನಂತರ ಆಪ್ಷನ್ ಎಂಟ್ರಿಯಲ್ಲಿ ಮಾತ್ರ ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ ಅಭ್ಯರ್ಥಿಗಳು ಸ್ವತಃ ಆನ್‌ಲೈನ್ ಮೂಲಕ ಅಥವಾ ಸಮಿಪದ ಯಾವುದೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ" ಗಳ ಮೂಲಕ ಮನವಿ ಸಲ್ಲಿಸುವ ದಿನಾಂಕ | 02–09–2020 & 03–09–2020 |
| 8. | ಪ್ರಥಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 04–09–2020 ಸಂಜೆ 5.00 ಗಂಟೆಗೆ |
| 9. | ಪ್ರಥಮ ಸುತ್ತಿನ ಸೀಟು ಹಂಚಿಕೆಯಾದ ನಂತರ ಅಭ್ಯರ್ಥಿಗಳು ಸ್ವತಃ ಆನ್‌ಲೈನ್ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮುಖಾಂತರ Choice-1, Choice-2, Choice-3, Choice-4 ಗಳ ಆಯ್ಕೆಯನ್ನು ಆನ್‌ಲೈನ್‌ನಲ್ಲಿ ಮಾಡಲು ಪ್ರಾರಂಭ ಮತ್ತು ಅಂತಿಮ ದಿನಾಂಕ | 05–09–2020 ಬೆಳಿಗ್ಗೆ 10.00 ರಿಂದ 10–09–2020 ಸಂಜೆ 5.00 ವರೆಗೆ |
| 10. | Choice-1 ನ್ನು ಆಯ್ಕೆ ಮಾಡಿದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿಯೇ ಎಲ್ಲಾ ಮೂಲ ದಾಖಲಾತಿಗಳನ್ನು ಸಲ್ಲಿಸಿ, ನಿಗಧಿತ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಪ್ರಾರಂಭ ಮತ್ತು ಅಂತಿಮ ದಿನಾಂಕ: | 05–09–2020 ಬೆಳಿಗ್ಗೆ 10.00 ರಿಂದ 12–09–2020 ಸಂಜೆ 5.00 ವರೆಗೆ |
| 11. | ಮೊದಲನೇ ಸುತ್ತಿನ ನಂತರ ಭರ್ತಿಯಾಗದೆ ಖಾಲಿ ಉಳಿಕೆ ಸೀಟುಗಳ ಸೀಟ್ ಮ್ಯಾಟ್ರಿಕ್ಸ್‌ನ್ನು (Seat Matrix) ಮೇಲ್ಕಂಡ ವೆಬ್‌ಸೈಟ್‌ಗಳ ಮೂಲಕ ಪ್ರಕಟಿಸುವ ದಿನಾಂಕ: | 13–09–2020 ಸಂಜೆ 5.00 ಗಂಟೆಗೆ |

| | | |
|---|---|---|
| 12. | ಅ) **Choice-2** ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಹಂಚಿಕೆಯಾದ ಸೀಟ್‌ನ್ನು ತನ್ನಲ್ಲಿಯೇ ಇಟ್ಟುಕೊಂಡು ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು. ಅಭ್ಯರ್ಥಿಯು ಸ್ವತಃ ಅಥವಾ ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮುಖಾಂತರ ಎರಡನೇ ಸುತ್ತಿನ ಸೀಟು ಹಂಚಿಕೆಗೆ ತಮ್ಮ ಇಚ್ಛೆನುಸಾರ **Options** ಗಳ ಆದ್ಯತಾ ಕ್ರಮಗಳನ್ನು ಅದಲು ಬದಲು **(Reordering)** ಮಾಡಲು ಅಥವಾ ಹೊಸದಾಗಿ **Options** ಗಳನ್ನು ಆದ್ಯತಾ ಕ್ರಮಗಳಲ್ಲಿ ನಮೂದಿಸಲು ಪ್ರಾರಂಭ & ಅಂತಿಮ ದಿನಾಂಕ.<br><br>ಆ) **Choice-3**ನ್ನು ಆಯ್ಕೆ ಮಾಡಿದ ಅಭ್ಯರ್ಥಿಗಳು ಸ್ವತಃ ಅಥವಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮುಖಾಂತರ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಮೊದಲ ಸುತ್ತಿನಲ್ಲಿ ದಾಖಲು ಮಾಡಿದ **Options** ಗಳ ಆದ್ಯತಾ ಕ್ರಮಗಳನ್ನು ಅದಲು ಬದಲು **(Reordering)** ಮಾಡಲು ಅಥವಾ ಹೊಸದಾಗಿ **Options** ಗಳನ್ನು ಆದ್ಯತಾ ಕ್ರಮಗಳಲ್ಲಿ ನಮೂದಿಸಲು ಪ್ರಾರಂಭ & ಅಂತಿಮ ದಿನಾಂಕ. | **14-09-2020**<br>**ಬೆಳಿಗ್ಗೆ 10.00**<br>**ರಿಂದ**<br>**18-09-2020**<br>**ಸಂಜೆ 5.00 ವರೆಗೆ** |
| 13. | ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | **19-09-2020**<br>**ಸಂಜೆ 5.00 ಕ್ಕೆ** |
| 14. | ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನಿಗಧಿತ ದಿನಾಂಕದೊಳಗೆ ನಿಗಧಿತ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಅಂತಿಮ ದಿನಾಂಕ | **20-09-2020**<br>**ಬೆಳಿಗ್ಗೆ 10.00 ರಿಂದ**<br>**24-09-2020**<br>**ಸಂಜೆ 5.00 ವರೆಗೆ** |
| 15. | ಎರಡನೇ ಸುತ್ತಿನ ನಂತರ ಭರ್ತಿಯಾಗದೆ ಬಾಕಿ ಉಳಿಯುವ ಸೀಟುಗಳ ಹಂಚಿಕೆ ಕುರಿತಾದ ಪ್ರಕಟಣೆಗಾಗಿ ಅಭ್ಯರ್ಥಿಗಳು ಮೇಲ್ಕಂಡ ವೆಬ್ ಸೈಟ್‌ಗಳ ಮೂಲಕ ಮಾಹಿತಿ ಪಡೆಯುವುದು. | ದಿನಾಂಕ ತಿಳಿಸಲಾಗುವುದು. |

ಸಹಿ/-

**ಆಯುಕ್ತರು,**
**ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ,**
**ಬೆಂಗಳೂರು.**